# ಕರ್ನಾಟಕ ಸರ್ಕಾರದ ನಡವಳಿಗಳು

15

**ವಿಷಯ:** ಮೈಸೂರು ತಂಬಾಕು ಕಂಪನಿಯ ಖಾಸಗಿ ಷೇರುದಾರರ ಷೇರುಗಳನ್ನು ಕೆಪೆಕ್ ಸಂಸ್ಥೆಯ ಪರವಾಗಿ ಖರೀದಿಸಲು ರೂ.859.00 ಲಕ್ಷಗಳ ಅನುದಾನ ಬಿಡುಗಡೆ ಬಗ್ಗೆ.

**ಓದಲಾಗಿದೆ:** 1. ಸರ್ಕಾರಿ ಆದೇಶ ಸಂ: ಕೃಇ/106/ಕೃಉಇ/2009, ದಿ: 28-01-2013.
2. ಕೃಷಿ ನಿರ್ದೇಶಕರ ಪತ್ರ ಸಂ:ವಾಬೆ-3/ಮೈತೊಕಂ/ಖಾಷೇಖ-ಅ.ಛಿ/2012-13, ದಿ: 05-03-2013.
3. ಮೈಸೂರು ತಂಬಾಕು ಮಂಡಳಿಯ ಪತ್ರ ಸಂ:MTC/MD/2013-14, ದಿ: 26-12-2013.
4. ಕಾನೂನು ಇಲಾಖೆಯ ಟಿಪ್ಪಣಿ ಸಂ: ಲಾ/595/ಅಭಿ/2013, ದಿ: 29-01-2014.
5. ದಿ: 31-05-2013 ರಂದು ನಡೆದ ಮೈಸೂರು ತಂಬಾಕು ಕಂಪನಿಯ ವಿಶೇಷ ಸಾಮಾನ್ಯ ಸಭೆಯ ನಡವಳಿ.
6. ಆರ್ಥಿಕ ಇಲಾಖೆಯ ಟಿಪ್ಪಣಿ ಸಂ:ಆಇ/264/ವೆಚ್ಚ-4/2013, ದಿ: 05-08-2014.

**ಪ್ರಸ್ತಾವನೆ:-**

ಮೈಸೂರು ತಂಬಾಕು ಮಂಡಳಿಯನ್ನು ರಾಜ್ಯದಲ್ಲಿ ಸಿಗರೇಟು, ತಂಬಾಕು ಬೆಳೆಯನ್ನು ಪ್ರೋತ್ಸಾಹಿಸಲು ಹಾಗೂ ರೈತರಿಗೆ ಕೃಷಿ ಪರಿಕರ ಒದಗಿಸುವ ಹಾಗೂ ಉತ್ಪನ್ನವನ್ನು ಮಾರುಕಟ್ಟೆ ಮಾಡಲು ನೆರವಾಗುವ ಉದ್ದೇಶದಿಂದ 1937ರಲ್ಲಿ ಪ್ರಾರಂಭಿಸಲಾಗಿದ್ದು, ಕಂಪನಿಯ ಅಧಿಕೃತ ಷೇರು ಬಂಡವಾಳ ರೂ.100 ಲಕ್ಷಗಳಾಗಿದ್ದು, ನೀಡಿಕೆ ಬಂಡವಾಳ ರೂ.77.37.940.00 ಲಕ್ಷ ಇರುತ್ತದೆ. ಇದರಲ್ಲಿ ಕರ್ನಾಟಕ ಸರ್ಕಾರದ ಪಾಲು ಶೇಕಡ 78.21, ಕರ್ನಾಟಕ ಕೃಷಿ ಕೈಗಾರಿಕೆ ನಿಗಮದ ಪಾಲು ಶೇಕಡ 14.28 ಹಾಗೂ ಖಾಸಗಿ ಷೇರುದಾರರ ಪಾಲು ಶೇಕಡ 7.51 ಇರುತ್ತದೆ. ಭಾರತ ಸರ್ಕಾರವು 1983ರಿಂದ ಕರ್ನಾಟಕದಲ್ಲಿ ತಂಬಾಕು ಮಂಡಳಿಯನ್ನು ಪ್ರಾರಂಭಿಸಿದ್ದು, ಮೈಸೂರು ತಂಬಾಕು ಮಂಡಳಿಯ ಎಲ್ಲಾ ಚಟುವಟಿಕೆಗಳನ್ನು ಟೊಬ್ಯಾಕೊ ಮಂಡಳಿಗೆ ವರ್ಗಾಯಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರದ ನಿರ್ದೇಶನದಂತೆ 1984 ರಿಂದ ಮೈಸೂರು ತಂಬಾಕು ಕಂಪನಿಯ ಎಲ್ಲಾ ಚಟುವಟಿಕೆಗಳನ್ನು ನಿಲ್ಲಿಸಲಾಗಿದೆ.

ಮೇಲೆ ಓದಲಾದ (1) ರಲ್ಲಿ ಮೈಸೂರು ತಂಬಾಕು ಕಂಪನಿಯನ್ನು ಸಂಪೂರ್ಣ ಸರ್ಕಾರದ ಕಂಪನಿ ಮಾಡುವ ದಿಸೆಯಲ್ಲಿ ಇದರ ಖಾಸಗಿ ಷೇರುದಾರರ ಷೇರುಗಳನ್ನು ಖರೀದಿಸುವ ಕುರಿತು ಷೇರು ದರವನ್ನು ಪ್ರತಿ ಷೇರಿಗೆ ರೂ.1,479.00 ರಂತೆ ಮಾರಾಟ ಮಾಡಲು ಖಾಸಗಿ ಷೇರುದಾರರೊಂದಿಗೆ ಪ್ರಸ್ತಾಪಿಸಲು ಹಾಗೂ ಖಾಸಗಿ ಷೇರುಗಳನ್ನು ಖರೀದಿಸಲು ಅಗತ್ಯವಿರುವ ರೂ.8.59 ಕೋಟಿಗಳ ಹೆಚ್ಚುವರಿ ಅನುದಾನವನ್ನು ಈ ಉದ್ದೇಶಕ್ಕಾಗಿ ಒದಗಿಸಲು ಮತ್ತು ಕಂಪನಿಯ ಭೂ ಆಸ್ತಿಗಳನ್ನು ಸಾರ್ವಜನಿಕ ಸೂಕ್ತ ಉದ್ದೇಶಕ್ಕಾಗಿ ಬಳಸಲು ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

ಮೇಲೆ ಓದಲಾದ (2) ರಲ್ಲಿ ಕೃಷಿ ನಿರ್ದೇಶಕರು, ಮೈಸೂರು ತಂಬಾಕು ಕಂಪನಿಯ ಖಾಸಗಿ ಷೇರುಗಳನ್ನು ಖರೀದಿಸಲು ಅವಶ್ಯವಿರುವ ಅನುದಾನ ರೂ.859.00 ಲಕ್ಷಗಳನ್ನು ಕೃಷಿ ಇಲಾಖೆಗೆ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ (3) ರಲ್ಲಿ ಮೈಸೂರು ತಂಬಾಕು ಕಂಪನಿಯ ಕಂಪನಿ ಸೆಕ್ರೆಟರಿ ರವರು "ಕಂಪನಿಯ ನಿಯಮಾವಳಿಗಳನ್ವಯ ಇತರ ಭಾಗೀದಾರರ ಷೇರುಗಳನ್ನು ಖರೀದಿಸಲು ಅವಕಾಶವಿಲ್ಲದಿದ್ದರೂ ಕೆಪೆಕ್ ಸಂಸ್ಥೆಯು ಸರ್ಕಾರದ ಪರವಾಗಿ ಖರೀದಿಸಬಹುದೆಂದು ಹಾಗೂ ಈ ಷೇರುಗಳನ್ನು ಖರೀದಿಸಲು ಯಾವುದೇ ಅಡಚಣೆ ಇಲ್ಲವೆಂದು" ಅಭಿಪ್ರಾಯ ನೀಡಿರುವುದನ್ನು ಆರ್ಥಿಕ ಇಲಾಖೆಯು ಮನಗಂಡಿರುತ್ತದೆ.

ಮೇಲೆ ಓದಲಾದ (4) ರಲ್ಲಿ ಕಾನೂನು ಇಲಾಖೆಯು ಮೈಸೂರು ತಂಬಾಕು ಕಂಪನಿಯ Article of Association & Memorandum of Association ಪ್ರಕಾರ ಕಾನೂನಿನಡಿ ಕಂಪನಿಯು ತನ್ನ ಖಾಸಗೀ ಷೇರುಗಳನ್ನು ಖರೀದಿಸಲು ಅವಕಾಶವಿಲ್ಲವೆಂದು ಅಭಿಪ್ರಾಯ ನೀಡಿರುತ್ತದೆ.

ಮೇಲೆ ಓದಲಾದ (5) ರ ವಿಶೇಷ ಸಾಮಾನ್ಯ ಸಭೆಯ ನಡವಳಿಯಲ್ಲಿ ಮೈಸೂರು ತಂಬಾಕು ಕಂಪನಿಯ ಖಾಸಗೀ ಷೇರುದಾರರೊಡನೆ ನಡೆದ ಚರ್ಚೆಯಲ್ಲಿ ಖಾಸಗೀ ಷೇರುಗಳನ್ನು ಪ್ರತಿ ಷೇರಿಗೆ ರೂ.1479.00 ರಂತೆ ಖರೀದಿಸಲು ಅನುಮೋದನೆ ನೀಡಲಾಗಿದೆ.

ಮೇಲೆ ಓದಲಾದ (6) ರಲ್ಲಿ ಆರ್ಥಿಕ ಇಲಾಖೆಯು ಮೈಸೂರು ತಂಬಾಕು ಕಂಪನಿಯ ಖಾಸಗೀ ಷೇರುಗಳನ್ನು ಕೆಪೆಕ್ ಸಂಸ್ಥೆಯ ಪರವಾಗಿ ಖರೀದಿಸಲು ಲೆಕ್ಕ ಶೀರ್ಷಿಕೆ: 4401-00-190-0-02-211(ಯೋಜನೆ) ಯಡಿ ರೂ.859.00 ಲಕ್ಷಗಳನ್ನು ಒದಗಿಸಿದೆ.

ಸರ್ಕಾರವು ಕೂಲಂಕಷವಾಗಿ ಪ್ರಸ್ತಾವನೆಯನ್ನು ಪರಿಶೀಲಿಸಿದ್ದು, ಅದರಂತೆ ಈ ಕೆಳಕಂಡ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ/28/ಕೃಉಇ/2013 ಬೆಂಗಳೂರು, ದಿ:25-08-2014.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಮೈಸೂರು ತಂಬಾಕು ಕಂಪನಿಯ ಖಾಸಗೀ ಷೇರುದಾರರ ಷೇರುಗಳನ್ನು ಕೆಪೆಕ್ ಸಂಸ್ಥೆಯ ಪರವಾಗಿ ಖರೀದಿಸಲು ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ (ಕೆಪೆಕ್) ಸಂಸ್ಥೆಯನ್ನು ವಿಶೇಷ ಉದ್ದೇಶಿತ ಸಂಸ್ಥೆಯನ್ನಾಗಿ ಸರ್ಕಾರ ನೇಮಕ ಮಾಡಿದ್ದು, ಪ್ರತಿ ಷೇರಿಗೆ ರೂ.1479.00 ರಂತೆ ಒಟ್ಟು 58079 ಖಾಸಗೀ ಷೇರುಗಳನ್ನು ಖರೀದಿಸಲು ರೂ.859.00 ಲಕ್ಷಗಳನ್ನು (ಎಂಟು ನೂರಾ ಐವತ್ತೊಂಭತ್ತು ಲಕ್ಷ ರೂಪಾಯಿಗಳು ಮಾತ್ರ) ಲೆಕ್ಕ ಶೀರ್ಷಿಕೆ:4401-00-190-0-02-211 (ಯೋಜನೆ) ಯಡಿ ಕೃಷಿ ನಿರ್ದೇಶಕರಿಗೆ ಬಿಡುಗಡೆ ಮಾಡಿ ಆದೇಶಿಸಿದೆ. ಬಿಡುಗಡೆ ಮಾಡಿರುವ ಅನುದಾನವನ್ನು ಕೆಪೆಕ್ ಸಂಸ್ಥೆಯು ಕೃಷಿ ನಿರ್ದೇಶಕರಿಗೆ ಸಹಾಯಾನುದಾನದ ಬಿಲ್ಲುಗಳನ್ನು ಸಲ್ಲಿಸಿ ಕೌಂಟರ್ ಸಹಿ ಪಡೆದು ಬಿಡುಗಡೆ ಮಾಡಿಕೊಳ್ಳುವುದು. ಷೇರುಗಳನ್ನು ಖರೀದಿಸುವ ಸಲುವಾಗಿ ಬಿಡುಗಡೆ ಮಾಡಲಾಗಿರುವ ಅನುದಾನ ಮೇಲೆ ಅರ್ಜಿಸಿದ ಬಡ್ಡಿಯನ್ನು ಹೆಚ್ಚುವರಿ ಅನುದಾನವೆಂದು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ/472/ವೆಚ್ಚ-4/13.ದಿನಾಂಕ:26-10-2013ರನ್ವಯ ಪರಿಗಣಿಸುವುದು.

ಕೆಪೆಕ್ ಸಂಸ್ಥೆಯು ಮೈಸೂರು ತಂಬಾಕು ಕಂಪನಿಯ ಸಹಯೋಗ ಹಾಗೂ ಸಹಕಾರದೊಂದಿಗೆ ಈ ಆದೇಶ ತಲುಪಿದ ತಕ್ಷಣದಿಂದ ಖರೀದಿ ಪ್ರಕ್ರಿಯೆಯನ್ನು ಪ್ರಾರಂಭಿಸುವುದು. ಕೆಪೆಕ್ ಸಂಸ್ಥೆಗೆ ಸದರಿ ಅನುದಾನದ ಸ್ವೀಕೃತಿಯಲ್ಲಿ ವಿಳಂಬವಾದಲ್ಲಿ ಕೆಪೆಕ್ ಸಂಸ್ಥೆಯು ತನ್ನಲ್ಲಿರುವ ಹಣಕಾಸಿನ ಲಭ್ಯತೆಯಿಂದ ಈ ಪ್ರಕ್ರಿಯೆಯನ್ನು ಪ್ರಾರಂಭಿಸಬಹುದಾಗಿದೆ.

ಮೈಸೂರು ತಂಬಾಕು ಕಂಪನಿಯು ಈ ಪ್ರಕ್ರಿಯೆಗೆ ಕೆಪಕ್ ಸಂಸ್ಥೆಗೆ ಬೇಕಾಗುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲು ಹಾಗೂ ಇತರೇ ಕ್ರಮಕ್ಕೆ ಸಹಕರಿಸುವುದು.

..3..

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ: ಆಇ/264/ವೆಚ್ಚ-4/2013, ದಿ:05-08-2014 ರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಜ್ಯೋತಿ.ಆರ್.ಜೆ),
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ).

**ಪ್ರತಿ:**

1. ಪಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
2. ಪಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
3. ಪಧಾನ ಮಹಾಲೇಖಪಾಲರು (A&E), ಕರ್ನಾಟಕ ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು
4. ಪ್ರಧಾನ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಆರ್ಥಿಕ ಇಲಾಖೆ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಸಾರ್ವಜನಿಕ ಉದ್ದಿಮೆಗಳ ಇಲಾಖೆ, ಬೆಂಗಳೂರು.
7. ಆಯುಕ್ತರು/ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
8. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಕೇಂದ್ರ, ಬೆಂಗಳೂರು.
9. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು,
10. ಸರ್ಕಾರದ ಉಪ ಕಾರ್ಯದರ್ಶಿ-1, ಆರ್ಥಿಕ ಇಲಾಖೆ, ಬೆಂಗಳೂರು.
11. ಸರ್ಕಾರದ ಉಪಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಇಲಾಖೆ.
12. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ಬೆಂಗಳೂರು.
13. ಸರ್ಕಾರದ ಉಪ ಕಾರ್ಯದರ್ಶಿ-1 ಮತ್ತು 2, ಕೃಷಿ ಇಲಾಖೆ, ಬೆಂಗಳೂರು.
14. ವ್ಯವಸ್ಥಾಪಕ ನಿರ್ದೇಶಕರು, ದಿ ಮೈಸೂರು ಟೊಬ್ಯಾಕೋ ಕಂಪನಿ, # 17, ರಿಚ್‌ಮಂಡ್ ರಸ್ತೆ, ಬೆಂಗಳೂರು-560 025.
15. ವ್ಯವಸ್ಥಾಪಕ ನಿರ್ದೇಶಕರು, ಕೆಪೆಕ್, #17, ರಿಚ್‌ಮಂಡ್ ರಸ್ತೆ, ಬೆಂಗಳೂರು-560 025.
16. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.